

# ಶಿವರಾತ್ರಿಯ ಸ್ಪೆಷಲ್ ಹೂವು

**ಶಿವನಿಗೆ ಪ್ರಿಯವಾದ ಹೂವಾಗಿದ್ದರೂ ಶಿವರಾತ್ರಿಯ ದಿನ ಹೊರತುಪಡಿಸಿ ಉಳಿದ ದಿನಗಳಲ್ಲಿ ತಿಲಗಿ ಹೂವನ್ನು ಶಿವನಿಗೆ ಅರ್ಪಿಸದಿರುವುದು ವಿಶೇಷ.**

■ ಚಿತ್ರ- ಬರಹ:
**ದೇವರು ಆರ್. ಭಟ್ಟ ಕಲಗಾರು**

ಶಿವ, ಶಿವರಾತ್ರಿ ಆರಾಧನೆ ಎಂದ ತಕ್ಷಣ ನೆನಪಾಗುವುದು ಬಿಲ್ವಪತ್ರೆ. ಶಿವನಿಗೇನೋ ಬಿಲ್ವಪತ್ರೆ ಪ್ರಿಯವಾದುದು ಸರಿ. ಅದು ಸದಾ ಕಾಲ ಅರ್ಪಿಸಬಹುದಾದದ್ದು. ಶಿವರಾತ್ರಿಯ ದಿನ ಶಿವನಿಗೆ ಅರ್ಪಿಸಲು ತಿಲಿಗಿ ಹೂವು ಎಂಬ ವಿಶೇಷ ಹೂವೊಂದಿದೆ. ಶಿವರಾತ್ರಿಯ ದಿನ ಬೆಳಿಗ್ಗೆ ಗುಡ್ಡ ಬೆಟ್ಟಗಳಲ್ಲಿ ಅರಳಿ ನಿಂತ ಹೂವನ್ನು ತಂದು ಶಿವನಿಗೆ ಅರ್ಪಿಸುವುದು ಮಲೆನಾಡಿನ ಸಂಪ್ರದಾಯ.

ಅಚ್ಚ ಬಿಳಿ ಹಾಗೂ ಮಾಸಲು ಬಿಳಿ ಬಣ್ಣಗಳಲ್ಲಿ ಕಂಡುಬರುವ ಪುಟ್ಟ ಪುಟ್ಟ ಹೂವುಗಳ ಗೊಂಚಲು. 8–10 ಅಡಿ ಎತ್ತರದ ಬೆಳೆವ ಪೊದೆ ಗಿಡಗಳು ಮಲೆನಾಡಿನ ಗುಡ್ಡ ಬೆಟ್ಟದ ಅಂಚುಗಳಲ್ಲಿ ಕಾಣಸುತ್ತವೆ. ಕಾಂಡದ ಎರಡೂ ಬದಿಗಳಲ್ಲಿ ಚೂಪಾದ ಎಲೆಗಳನ್ನು ಹೊಂದಿದ್ದು ತುದಿಯಲ್ಲಿ ಮಾವು ಹೂವಿನ ತೆನೆಯಂತೆ, ಶಿವರಾತ್ರಿ ಹತ್ತಿರ ಬಂದಾಗ ಅರಳಿ ನಿಲ್ಲುತ್ತವೆ.

ವರ್ಷಕ್ಕೊಮ್ಮೆ ಮಾತ್ರ ಹೂವು ಬಿಡುವ ಗಿಡದಲ್ಲಿ ಕಾಯಿ, ಬೀಜಗಳು ಕಂಡಿಲ್ಲ. ಹಸಿರೆಲೆ ಗೊಬ್ಬರಕ್ಕಾಗಿ ಸೊಪ್ಪನ್ನು ಕಡಿಯುವುದರಿಂದ ಸಸ್ಯಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹೂವು ತೆಳುವಾದ ಪರಿಮಳ ಹೊಂದಿದ್ದು, ಶಿವರಾತ್ರಿಯ ದಿನವಿಡೀ ಮನೆಯ ತುಂಬ ಹೂವಿನ ಪರಿಮಳ ಹದವಾಗಿ ಪಸರಿಸಿರುತ್ತದೆ.

ಶಿವನಿಗೆ ಪ್ರಿಯವಾದ ಹೂವಾಗಿದ್ದರೂ ಶಿವರಾತ್ರಿಯ ದಿನ ಹೊರತುಪಡಿಸಿ ಉಳಿದ ದಿನಗಳಲ್ಲಿ ತಿಲಗಿ ಹೂವನ್ನು ಶಿವನಿಗೆ ಅರ್ಪಿಸದಿರುವುದು ವಿಶೇಷ. ■

